ಸಮಸ್ಯೆಗಳನ್ನು ಕುರಿತು ಅವರು ನನಗೆ ಹೇಳಿದರು.'

ಲೋಹಿಯಾ ವಿಶ್ರಾಂತಿಯ ಕತೆ ಅಲ್ಲಿಗೆ ಮುಗಿಯಿತು!

ಲೋಹಿಯಾ ಜರ್ಮನಿಯಲ್ಲಿದ್ದಾಗಲೇ 'ಗೋವಾದ ಸರ್ವಾಧಿಕಾರದ ವಿರುದ್ಧ ದನಿ ಎತ್ತಲೇಬೇಕು' ಎಂದು ಮೆನೆಜಿಸ್‌ಗೆ ಹೇಳಿದ್ದರು. ಗೆಳೆಯರಿಬ್ಬರೂ ಚರ್ಚಿಸಿ, ಗೋವಾದಲ್ಲಿ ಸಾರ್ವಜನಿಕ ಸಭೆಗಳ ಮೇಲೆ ಹೇರಲಾಗಿದ್ದ ನಿಷೇಧವನ್ನು ಉಲ್ಲಂಘಿಸುವ ಸತ್ಯಾಗ್ರಹ ಶುರು ಮಾಡಲು ತೀರ್ಮಾನಿಸಿದರು. 435 ವರ್ಷಗಳ ಪೋರ್ಚುಗೀಸ್ ಸರ್ಕಾರದ ವಿರುದ್ಧ ಇದು ಮೊಟ್ಟ ಮೊದಲ ನಾಗರಿಕ ಅವಿಧೇಯತೆಯ ಚಳುವಳಿಯಾಗಿತ್ತು.

18 ಜೂನ್ 1946. ಮಡಗಾಂವ್‌ನಲ್ಲಿ ಪೋರ್ಚುಗೀಸ್ ಶಾಸನಗಳ ವಿರುದ್ಧ ಸಭೆ ಏರ್ಪಾಡಾಯಿತು. ಸಾವಿರಾರು ಜನ ನಿರ್ಭಯವಾಗಿ ಸಭೆಯಲ್ಲಿ ಭಾಗವಹಿಸಿದರು. ಪೋರ್ಚುಗೀಸ್ ಪೊಲೀಸರು ಜನರನ್ನು ಹೆದರಿಸಿ ಚದುರಿಸಲೆತ್ನಿಸುತ್ತಿದ್ದರು. ಲೋಹಿಯಾ ಕಾರಿನಿಂದ ಇಳಿದ ತಕ್ಷಣ ಪೊಲೀಸ್ ಅಧಿಕಾರಿ ಮಿರಾಂಡ ಅವರನ್ನು ತಡೆದು ನಿಲ್ಲಿಸಲೆತ್ನಿಸಿದ. ಲೋಹಿಯಾ ಅವನನ್ನು ಬದಿಗೆ ತಳ್ಳುತ್ತಲೇ ವೇದಿಕೆ ಹತ್ತಿದರು.

ಇನ್ನೇನು ಲೋಹಿಯಾ ಭಾಷಣ ಶುರು ಮಾಡಬೇಕು, ಮಿರಾಂಡ ಪಿಸ್ತೂಲು ಗುರಿಯಿಟ್ಟು ನಿಂತ. ಲೋಹಿಯಾ ಮುಷ್ಟಿ ಮಿರಾಂಡನ ಕೈ ಹಿಡಿಯಿತು.

'ಎಷ್ಟೊಂದು ಜನ ಸೇರಿದಾರೆ ಕಾಣ್ತಾ ಇಲ್ವೇನ್ರಿ? ಇಲ್ಲಿ ರಕ್ತಪಾತ ಆದರೆ ಶಾಂತಿ ಹೇಗೆ ಕಾಪಾಡ್ತೀರ್‍ರೀ? ಪ್ರಜ್ಞೆ ಇದೆಯೇನ್ರಿ?' ಎಂದರು ಲೋಹಿಯಾ.

ಅಧಿಕಾರಿ ತಡಬಡಾಯಿಸಿದ. ಜನ ರೋಮಾಂಚನಗೊಂಡರು. ಲೋಹಿಯಾರ ದಿಟ್ಟ ಪ್ರಶ್ನೆ ಪೋರ್ಚುಗೀಸ್ ಆಡಳಿತಕ್ಕೆ ನೇರ ಸವಾಲೆಸೆದಿತ್ತು. ಗೋವಾದ ಜನ ಇಂಥ ದೃಶ್ಯವನ್ನೇ ಕಂಡಿರಲಿಲ್ಲ. ಲೋಹಿಯಾರ ಭಾಷಣಕ್ಕೆ ತಡೆಯೊಡ್ಡಿದರೂ, ಭಾಷಣದ ಪ್ರತಿಗಳನ್ನು ಮೊದಲೇ ಹಂಚಲಾಗಿತ್ತು. 'ಭಾರತೀಯ ನೆಲದ ಮೇಲೆ ಕೊನೆಯ ಸಾಮ್ರಾಜ್ಯಶಾಹಿ ಸಂಕೇತವಾಗಿರುವ ಗೋವಾದ ಪೋರ್ಚುಗೀಸ್ ಆಡಳಿತವನ್ನು ಬುಡಸಮೇತ ಕಿತ್ತೊಗೆಯುವ ಮೊದಲ ಹೆಜ್ಜೆ ಇದು' ಎಂದು ಲೋಹಿಯಾ ಘೋಷಿಸಿದ್ದರು. ಲೋಹಿಯಾ ಹಾಗೂ ಮೆನೆಜಿಸ್ ಬಂಧನಕ್ಕೊಳಗಾದರು. ಬಂಧನ ಖಂಡಿಸಿ ಗಾಂಧೀಜಿ ಹೇಳಿಕೆ ಕೊಟ್ಟರು.

'ಗೋವಾದಲ್ಲಿ ಏನಾಗುತ್ತಿದೆ, ಹೇಗೆ ಅದನ್ನೆಲ್ಲ ಮಾಡಲಾಗುತ್ತಿದೆ ಎಂಬ ಬಗ್ಗೆ ನನ್ನಿಂದ ಯಾವುದೇ ವಿವರವನ್ನು ಕೇಳದೆ, ತಕ್ಷಣ ಗಾಂಧೀಜಿ ನನ್ನನ್ನು ಸಮರ್ಥಿಸಿ ಹೇಳಿಕೆ ನೀಡಿದರು. ಗಾಂಧೀಜಿಯವರ ಈ ಪ್ರತಿಕ್ರಿಯೆ ನಿಜಕ್ಕೂ ಉದಾತ್ತವಾಗಿತ್ತು' ಎಂದು ಲೋಹಿಯಾ ಬರೆದರು.

ಮಾರನೆಯ ದಿನ ಗೋವಾ ಪೊಲೀಸರು ಲೋಹಿಯಾರನ್ನು ಗಡಿಯಾಚೆಗೆ ತಂದುಬಿಟ್ಟರು. ಆದರೆಲೋಹಿಯಾಸಭೆಫಲಕೊಟ್ಟಿತ್ತು.ಸಾರ್ವಜನಿಕ ಸಮಾರಂಭಗಳು ಪೂರ್ವಾನುಮತಿಯಿಲ್ಲದೆಯೇ ನಡೆಯಬಹುದೆಂದು ಆಡಳಿತ ಘೋಷಿಸಿತು. ಭಾರತದ ನೆಲದ ಮೇಲೆ ಕಾಲಿಟ್ಟ ಲೋಹಿಯಾ ಹೇಳಿದರು: 'ಗೋವಾದ ಜನರಿಗೆ ನಾಗರಿಕ ಹಕ್ಕುಗಳು ದೊರೆಯದಿದ್ದರೆ ಮೂರು ತಿಂಗಳ ನಂತರ ನಾನು ಮತ್ತೆ ಗೋವಾಕ್ಕೆ ಬರುತ್ತೇನೆ.'

ಲೋಹಿಯಾ ಭೇಟಿಯಾದಾಗ ಗಾಂಧೀಜಿ ಕೊಂಚ ಮುನಿಸಿಕೊಂಡೇ ಹೇಳಿದರು:

'ನೀವು ನಿಮ್ಮ ಗೋವಾ ಕಾರ್ಯಯೋಜನೆಯ ಬಗ್ಗೆ ನನಗೆ ಏನೂ ಹೇಳದಿದ್ದರೂ, ನಾನು ನನ್ನ ಕರ್ತವ್ಯ ಮಾಡಿದ್ದೇನೆ.'

'ನಾನು ಗೋವಾದಲ್ಲಿ ಏನು ಮಾಡುತ್ತೇನೆಂಬುದು ನನಗೇ ಮುಂಚಿತವಾಗಿ ತಿಳಿದಿರಲಿಲ್ಲ; ನನಗೆ ಆ ಬಗ್ಗೆ ಯಾವ ಅಂದಾಜೂ ಇರಲೇ ಇಲ್ಲ' ಎಂದರು ಲೋಹಿಯಾ.

ಲೋಹಿಯಾ ಮುಂಬಯಿಗೆ ಬಂದರು. ಕಾಂಗ್ರೆಸ್ ಕಾರ್ಯಕಾರಿಣಿಯ ಸಭೆ ನಡೆಯಲಿತ್ತು. ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನೆಹರು ಸಭೆಗೆ ಮುನ್ನ ಲೋಹಿಯಾರನ್ನು ಕರೆದು, 'ನೀವು ಕಾಂಗ್ರೆಸ್ ಕಾರ್ಯದರ್ಶಿಯಾಗಬೇಕು' ಎಂದರು. ಕಾರ್ಯದರ್ಶಿಯಾಗಲು ಲೋಹಿಯಾ ಮೂರು ಷರತ್ತುಗಳನ್ನಿಟ್ಟರು: ಕಾಂಗ್ರೆಸ್ ಅಧ್ಯಕ್ಷರು ಮಂತ್ರಿಮಂಡಲದಲ್ಲಿರುವುದಾಗಲೀ, ಪ್ರಧಾನಮಂತ್ರಿಯಾಗುವುದಾಗಲೀ ಕೂಡದು. ಕಾಂಗ್ರೆಸ್ ಕಾರ್ಯಕಾರಿಣಿಯಲ್ಲಿ ಕೇಂದ್ರದ ಯಾವ ಮಂತ್ರಿಯೂ ಇರಬಾರದು. ಕಾಂಗ್ರೆಸ್ ಮಂತ್ರಿಮಂಡಲದಿಂದ ಕಾಂಗ್ರೆಸ್ ಕಾರ್ಯಕಾರಿಣಿ ಸ್ವತಂತ್ರವಾಗಿರಬೇಕು; ಮಂತ್ರಿಮಂಡಲದ ಚಟುವಟಿಕೆಗಳನ್ನು ವಿಮರ್ಶಿಸುವ ಹಕ್ಕು ಕಾರ್ಯಕಾರಿಣಿಗಿರಬೇಕು.

ಷರತ್ತುಗಳಿಗೆ ನೆಹರು ಒಪ್ಪಲಿಲ್ಲ; ಲೋಹಿಯಾ ಬಗ್ಗಲಿಲ್ಲ!

1946ರಲ್ಲಿ 'ಕಾಂಗ್ರೆಸ್ ಸೋಷಲಿಸ್ಟ್ ಪಾರ್ಟಿ'ಯ ಮೇಲಿನ ನಿಷೇಧ ರದ್ದಾಯಿತು. ಕ್ವಿಟ್ ಇಂಡಿಯಾ ಚಳುವಳಿಯ ನಂತರ ಸೋಷಲಿಸ್ಟ್ ಪಕ್ಷದ ನಾಯಕರು ಹೆಚ್ಚು ಬೆಸೆದುಕೊಂಡಿದ್ದರು; ದೇಶದ ರಾಜಕಾರಣದಲ್ಲಿ ಸಮಾಜವಾದಿ ಪಕ್ಷ ಹೊಸ ಪಾತ್ರ ನಿರ್ವಹಿಸಬೇಕು ಎಂಬ ತುರ್ತು ಸಮಾಜವಾದಿಗಳಲ್ಲಿ ಮೂಡಿತ್ತು.

ಈ ನಡುವೆ ಪೂರ್ಣಿಮಾ ಬ್ಯಾನರ್ಜಿ 1946ರಲ್ಲಿ ಉತ್ತರ ಪ್ರದೇಶದ ಸಂಯಕ್ತ ವಿಧಾನಸಭೆಯ ಸದಸ್ಯೆಯಾದರು. ಸಂಯುಕ್ತ ವಿಧಾನಸಭೆಯ ಸದಸ್ಯತ್ವ ಪಡೆಯಲು ಬ್ರಿಟಿಷ್ ಅರಸೊತ್ತಿಗೆಗೆ ತಮ್ಮ ನಿಷ್ಠೆ ಘೋಷಿಸಬೇಕಾಗಿತ್ತು. ಈ ಕಾರಣದಿಂದ ಲೋಹಿಯಾ ಸಂಯುಕ್ತ ವಿಧಾನಸಭೆಗೆ ಹೋಗಲು ಒಪ್ಪಲಿಲ್ಲ. ಈ ಆಸುಪಾಸಿನಲ್ಲೇ ಲೋಹಿಯಾ–ಪೂರ್ಣಿಮಾ ಸಂಬಂಧದಲ್ಲಿದ್ದ ಆತ್ಮೀಯತೆಯ ಎಳೆ ಕಣ್ಮರೆಯಾಯಿತು. ಖಾಸಗಿ ವಿಚಾರಗಳನ್ನು ಹೆಚ್ಚು ಚರ್ಚಿಸದ ಲೋಹಿಯಾ ಅನಂತರವೂ ಪೂರ್ಣಿಮಾ ಬಗ್ಗೆ ಗೌರವದಿಂದ ನಡೆದುಕೊಳ್ಳುತ್ತಿದ್ದರು. ಪೂರ್ಣಿಮಾ 1951ರಲ್ಲಿ ಅನಾರೋಗ್ಯದಿಂದ ತೀರಿಕೊಂಡರು.

ಲೋಹಿಯಾ ಆರಂಭಿಸಿದ ಗೋವಾ ವಿಮೋಚನೆಯ ಹೋರಾಟಕ್ಕೆ ಮುಂಬಯಿ ಕೇಂದ್ರವಾಯಿತು. ಮುಂಬಯಿಯಲ್ಲಿ ಗೋವನ್ನರು ದೊಡ್ಡ ಸಂಖ್ಯೆಯಲ್ಲಿದ್ದರು. ಮುಂಬಯಿಯ ಸಭೆಯಲ್ಲಿ 'ಭಾರತದಿಂದ ಸಾಮ್ರಾಜ್ಯಶಾಹಿಯ ಪಳೆಯುಳಿಕೆಗಳನ್ನು ತೊಡೆದು ಹಾಕುವ ದಿಸೆಯಲ್ಲಿ ಗೋವಾ ವಿಮೋಚನೆ ಅತ್ಯಗತ್ಯ' ಎಂದು ಲೋಹಿಯಾ ಒತ್ತಿ ಹೇಳಿದರು.

ಗೋವಾ ಜನತೆಯ ಸ್ವಾತಂತ್ರ್ಯವನ್ನು ಮಾನ್ಯ ಮಾಡುವಂತೆ ಪೋರ್ಚುಗೀಸ್ ಸರ್ಕಾರವನ್ನು ಗಾಂಧೀಜಿ ಒತ್ತಾಯಿಸಿದ್ದರು. ನೆಹರೂ, ಪಟೇಲ್ ಥರದ ನಾಯಕರಿಗೆ ಗೋವಾ ಹೋರಾಟದಲ್ಲಿ ಆಸಕ್ತಿಯಿರಲಿಲ್ಲ. ಆದರೆ ಲೋಹಿಯಾರ ಸ್ವಾತಂತ್ರ್ಯ ಹೋರಾಟಕ್ಕೆ ಗಡಿಗೆರೆಗಳಿರಲಿಲ್ಲ. ಸಮಾಜವಾದಿ ಸಂಗಾತಿಗಳಾದ ಶಾಂತಿನಾಯಕ್ ಮೊದಲಾದವರ ಜೊತೆಗೂಡಿದ ಲೋಹಿಯಾ ಮಹಾರಾಷ್ಟ್ರದ ಕೆಲ ಭಾಗಗಳಲ್ಲಿ ಗೋವಾ ವಿಮೋಚನೆಯ ಅಲೆ ಎಬ್ಬಿಸಿದರು. ಕೊಟ್ಟ ಮಾತಿನಂತೆ ಲೋಹಿಯಾ ಗೋವಾಕ್ಕೆ ಹೊರಟರು; ಹೊರಡುವ ಮುನ್ನ ಗಾಂಧೀಜಿಗೂ ಹೇಳಿದ್ದರು.

ಲೋಹಿಯಾ ಗೋವಾಕ್ಕೆ ಬಂದ ತಕ್ಷಣ ಪೋರ್ಚುಗೀಸ್ ಸರ್ಕಾರ ಅವರನ್ನು ಬಂಧಿಸಿ ಕೊಳಕಾದ ಸೆರೆಮನೆಯಲ್ಲಿಟ್ಟಿತು. 'ಡಾ. ಲೋಹಿಯಾ ಸಾಮಾನ್ಯ ವ್ಯಕ್ತಿಯಲ್ಲ. ಲೋಹಿಯಾ ಬಂಧನದ ಮೂಲಕ ಪೋರ್ಚುಗೀಸ್ ಸರ್ಕಾರ ಭಾರತದ ಆತ್ಮವನ್ನೇ ಬಂಧಿಸಿದೆ' ಎಂದು ಗಾಂಧೀಜಿ ಬರೆದರು.

ಲೋಹಿಯಾರ ಬಿಡುಗಡೆಗಾಗಿ ಪ್ರಯತ್ನಿಸುವಂತೆ ಗಾಂಧೀಜಿ ನೆಹರುಗೆ ಬರೆದರು. ನೆಹರು ಈ ವಿಷಯದಲ್ಲಿ ತಾನು ಅಸಹಾಯಕ ಎಂದರು. ಸ್ವಾತಂತ್ರ್ಯ ಹಸ್ತಾಂತರದ ಘಟ್ಟದಲ್ಲಿ ತಂತಮ್ಮ ಅಧಿಕಾರದತ್ತ ಗಮನ ಕೊಟ್ಟಿದ್ದ ನೆಹರು, ಪಟೇಲ್ ಗೋವಾ ಪ್ರಶ್ನೆಯನ್ನು ಮೈ ಮೇಲೆಳೆದುಕೊಳ್ಳಲು ಸಿದ್ಧರಿರಲಿಲ್ಲ. 'ಗೋವಾ ಪ್ರಶ್ನೆ ಭಾರತದ ಮುಖದ ಮೇಲಿನ ಮೊಡವೆಯಂತೆ; ಚಿವುಟಿದರೆ ಹೋಗುತ್ತದೆ. ಅದಕ್ಕಾಗಿ ಚಳುವಳಿ ಮಾಡುವ ಅಗತ್ಯವಿಲ್ಲ' ಎಂದರು ನೆಹರು!

ಗಾಂಧೀಜಿ ವೈಸ್‌ರಾಯ್‌ಗೆ ಪತ್ರ ಬರೆದ ಮೇಲೆ ಹಾಗೂ ಚರ್ಚುಗಳ ಮಧ್ಯಪ್ರವೇಶದಿಂದ ಹತ್ತು ದಿನಗಳ ನಂತರ ಲೋಹಿಯಾ ಬಿಡುಗಡೆಯಾಯಿತು. 'ಗೋವಾದ ಯಾವ ಕಾನೂನನ್ನೂ ಉಲ್ಲಂಘಿಸದ ನನ್ನನ್ನು ಬಂಧಿಸಿ, ಉಸಿರಾಡುವಷ್ಟು ಗಾಳಿಯಷ್ಟೇ ಆಡುತ್ತಿದ್ದ ಸೆರೆಮನೆಯಲ್ಲಿರಿಸಿದ್ದಕ್ಕಾಗಿ ಪೋರ್ಚುಗೀಸ್ ಸರ್ಕಾರ ನನ್ನ ಕ್ಷಮೆ ಕೋರಬೇಕು ಹಾಗೂ ನನಗಾದ ನಷ್ಟಕ್ಕೆ ಪರಿಹಾರ ನೀಡಬೇಕು' ಎಂದು ಲೋಹಿಯಾ ಹೇಳಿಕೆ ಕೊಟ್ಟರು. ಗಾಂಧೀಜಿ ಈ ಬೇಡಿಕೆಯನ್ನು ಸಂಪೂರ್ಣವಾಗಿ ಸಮರ್ಥಿಸಿದರು; 'ಲೋಹಿಯಾಗೆ ಆದ ನೋವು ಗೋವಾದಲ್ಲಿರುವ ಸಮಸ್ತ ಭಾರತೀಯರಿಗೆ ಆದ ನೋವು; ಆ ಮೂಲಕ ಇಡೀ ಭಾರತಕ್ಕೆ ಆದ ನೋವು' ಎಂದು ಬರೆದರು.

ಭಾರತದ ಗಡಿ ಪ್ರದೇಶದ ಜನ ಗೋವಾ ಜೊತೆ ವ್ಯಾಪಾರ ವಹಿವಾಟು ನಿಲ್ಲಿಸಬೇಕೆಂದು ಲೋಹಿಯಾ ಕರೆ ಕೊಟ್ಟರು. ಗಡಿಗಳಿಂದ ಮಾಂಸ ಮಾರಾಟ ನಿಲ್ಲುತ್ತಿದ್ದಂತೆ ಪೋರ್ಚುಗೀಸ್ ಸರ್ಕಾರ